SÇF (4)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭಾಲ್ಕಿಯಲ್ಲಿ ಸೋಯಾಬೀನ್ ಸಂಸ್ಕರಣೆಗಾಗಿ ನೂತನವಾಗಿ ಸೋಯಾಬೀನ್ ಸಂಸ್ಕರಣಾ ಘಟಕ ಸ್ಥಾಪಿಸಲು ಭಾಲ್ಕಿ ಬೀಜೋತ್ಪಾದನಾ ಕೇಂದ್ರದ 2 ಎಕರೆ ಜಮೀನನ್ನು ನೀಡುವ ಬಗ್ಗೆ.

ಓದಲಾಗಿದೆ: ಕೃಷಿ ನಿರ್ದೇಶಕರ ಪತ್ರ ಸಂ: ಉಕೃನಿ(ಸ್ಟೇ.ಫಾ)/44/2013-14,
ದಿ: 10-01-2014 ಮತ್ತು 25-07-2014.

**ಪ್ರಸ್ತಾವನೆ:**

ಮೇಲೆ ಓದಲಾದ ಕೃಷಿ ನಿರ್ದೇಶಕರ ಪ್ರಸ್ತಾವನೆಯಲ್ಲಿ ಭಾಲ್ಕಿಯಲ್ಲಿ ಸೋಯಾಬೀನ್ ಸಂಸ್ಕರಣೆಗಾಗಿ ನೂತನವಾಗಿ ಸೋಯಾಬೀನ್ ಸಂಸ್ಕರಣಾ ಘಟಕ ಸ್ಥಾಪಿಸಲು ಭಾಲ್ಕಿ ಬೀಜೋತ್ಪಾದನಾ ಕೇಂದ್ರದ 2 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಇವರಿಗೆ ನೀಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತವು 5 ಎಕರೆ ಜಮೀನು ನೀಡುವಂತೆ ಪ್ರಸ್ತಾಪಿಸಿದ್ದು, ಕೃಷಿ ಇಲಾಖೆಯ ಅಧಿಕಾರಿಗಳು ಸದರಿ ಸ್ಥಳಕ್ಕೆ ಭೇಟಿ ನೀಡಿ ಬೀದರ್ ಜಿಲ್ಲೆಯ ಸೋಯಾಬೀನ್ ಬೆಳೆಗಾರರು ಸಾಕಷ್ಟು ಇದ್ದು, ಅವರಿಗೆ ಜಿಲ್ಲೆಯಲ್ಲಿಯೇ ಬಿತ್ತನೆ ಬೀಜ ಉತ್ಪಾದಿಸಿ ಒದಗಿಸಲು ವಿಫುಲವಾದ ಅವಕಾಶವಿದ್ದು, ಭಾಲ್ಕಿ ಮತ್ತು ಸುತ್ತಮುತ್ತಲಿನ ರೈತರ ಹಿತದೃಷ್ಟಿಯಿಂದ ಭಾಲ್ಕಿ-ಹುಮ್ನಾಬಾದ್ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ವೆ ನಂ.339 ರಲ್ಲಿನ ಭಾಲ್ಕಿ ಬೀಜೋತ್ಪಾದನಾ ಕೇಂದ್ರದ 2 ಎಕರೆ ಜಮೀನನ್ನು ಸುಸಜ್ಜಿತ ಸೋಯಾಬೀನ್ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ರವರಿಗೆ ಕೆಲವು ಷರತ್ತಿಗೆ ಒಳಪಟ್ಟು ಹಸ್ತಾಂತರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

- ಭಾಲ್ಕಿ ಬೀಜೋತ್ಪಾದನಾ ಕೇಂದ್ರದ ಸರ್ವೆ ನಂ.339ರಲ್ಲಿನ 2 ಎಕರೆ ಜಮೀನನ್ನು ಸೋಯಾಬೀನ್ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಹಸ್ತಾಂತರಿಸುವುದು.
- ಜಮೀನಿನ ಮಾಲೀಕತ್ವವನ್ನು ಕೃಷಿ ಇಲಾಖೆಯಲ್ಲಿಯೇ ಮುಂದುವರಿಸುವುದು.
- ಜಮೀನಿನ ಯಾವುದೇ ಭಾಗವನ್ನು ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಮಾರಾಟವನ್ನು ಬೇರೊಬ್ಬರಿಗೆ ಮಾಡಬಾರದು.
- ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆಯವರು ಸೋಯಾಬೀನ್ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಸಲುವಾಗಿ ತಗಲುವ ವೆಚ್ಚವನ್ನು ಅವರೇ ಭರಿಸತಕ್ಕದ್ದು. ಈ ಬಗ್ಗೆ ಕೃಷಿ ಇಲಾಖೆಯು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
- ಒಂದು ವೇಳೆ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆಯವರು ಸದರಿ ಜಮೀನನ್ನು ಕೃಷಿ ಇಲಾಖೆಗೆ ವಾಪಸ್ಸು ನೀಡಬೇಕಾದ ಸನ್ನಿವೇಶ ಒದಗಿದ್ದಲ್ಲಿ ತಮ್ಮ ಅವಧಿಯಲ್ಲಿ ಕೈಗೊಂಡಿರುವ ಮೂಲಭೂತ ಸೌಕರ್ಯಗಳು/ಕಟ್ಟಡ ನಿರ್ಮಾಣದ ವೆಚ್ಚವನ್ನಾಗಲಿ / ಮೌಲ್ಯವನ್ನಾಗಲಿ ಇಲಾಖೆಯು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆಗೆ ಭರಿಸುವುದಿಲ್ಲ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/85/ಕೃಇಕ/2014, ಬೆಂಗಳೂರು,**
**ದಿನಾಂಕ: 10-09-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಭಾಲ್ಕಿ-ಹುಮ್ನಾಬಾದ್ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ವೆ ನಂ.339 ರಲ್ಲಿನ ಭಾಲ್ಕಿ ಬೀಜೋತ್ಪಾದನಾ ಕೇಂದ್ರದ 2 ಎಕರೆ ಜಮೀನನ್ನು ಸುಸಜ್ಜಿತ ಸೋಯಾಬೀನ್ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

- ಭಾಲ್ಕಿ ಬೀಜೋತ್ಪಾದನಾ ಕೇಂದ್ರದ ಸರ್ವೆ ನಂ.339ರಲ್ಲಿನ 2 ಎಕರೆ ಜಮೀನನ್ನು ಸೋಯಾಬೀನ್ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಹಸ್ತಾಂತರಿಸುವುದು.
- ಜಮೀನಿನ ಮಾಲೀಕತ್ವವನ್ನು ಕೃಷಿ ಇಲಾಖೆಯಲ್ಲಿಯೇ ಮುಂದುವರೆಸುವುದು.
- ಜಮೀನಿನ ಯಾವುದೇ ಭಾಗವನ್ನು ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಮಾರಾಟವನ್ನು ಬೇರೊಬ್ಬರಿಗೆ ಮಾಡಬಾರದು.
- ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆಯವರು ಸೋಯಾಬೀನ್ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಸಲುವಾಗಿ ತಗಲುವ ವೆಚ್ಚವನ್ನು ಅವರೇ ಭರಿಸತಕ್ಕದ್ದು. ಈ ಬಗ್ಗೆ ಕೃಷಿ ಇಲಾಖೆಯು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
- ಒಂದು ವೇಳೆ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆಯವರು ಸದರಿ ಜಮೀನನ್ನು ಕೃಷಿ ಇಲಾಖೆಗೆ ವಾಪಸ್ಸು ನೀಡಬೇಕಾದ ಸನ್ನಿವೇಶ ಒದಗಿದ್ದಲ್ಲಿ ತಮ್ಮ ಅವಧಿಯಲ್ಲಿ ಕೈಗೊಂಡಿರುವ ಮೂಲಭೂತ ಸೌಕರ್ಯಗಳು/ಕಟ್ಟಡ ನಿರ್ಮಾಣದ ವೆಚ್ಚವನ್ನಾಗಲೀ / ಮೌಲ್ಯವನ್ನಾಗಲಿ ಇಲಾಖೆಯು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆಗೆ ಭರಿಸುವುದಿಲ್ಲ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಜ್ಯೋತಿ.ಆರ್.ಜೆ).**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ (ಯೋಜನೆ).**

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4. ಮಹಾಲೇಖಪಾಲರು, (ಲೆಕ್ಕ ಪತ್ರ ಮತ್ತು ತನಿಖೆ) ಕರ್ನಾಟಕ, ಬೆಂಗಳೂರು.
5. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಹೆಬ್ಬಾಳ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.
9. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.